**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-233 /2003** **DW-1**

**ದಿಃ 29.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 13 ನೇ ಪ್ರತಿವಾದಿ ಪರ ಶ್ರೀಮತಿ ಜೆ ಪಿ ಡಿ ವಕೀಲರಿಂದಃ**

ಮದ್ಯಂತರ ಅರ್ಜಿಯ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಚಾರಗಳನ್ನು ತಿಳಿದುಕೊಂಡು ಉಲ್ಲೇಖಿಸಿರುತ್ತೇನೆ. ಅದಕ್ಕೆ ಮಾಹಿತಿಯನ್ನು ತಿಳಿದುಕೊಂಡ ನಂತರವೇ ಸಹಿ ಮಾಡಿರುತ್ತೇನೆ. ಸುಮಾರು 4-5 ತಿಂಗಳ ಹಿಂದೆ ತೆಗೆಸಿದ ಪೋಟೋಗಳನ್ನು ಹಾಜರುಪಡಿಸಿರುತ್ತೇನೆ. ಪೋಟೋದಲ್ಲಿರುವ ಸ್ಥಳವು ಖುಲ್ಲಾ ಜಾಗಾ ಎಂದರೆ ಸರಿ. ಪೋಟೋದಲ್ಲಿ ಸ್ಥಳದ ಮಾಹಿತಿಯನ್ನೊಳಗೊಂಡ ಯಾವದೇ ಮಾಹಿತಿಗಳು ಇರುವದಿಲ್ಲ ಎಂದರೆ ಸರಿ. ಪೋಟೋದಲ್ಲಿ ವ್ಯವಸಾಯ ಮಾಡಿದ ಬಗ್ಗೆ ಯಾವದೇ ರೀತಿಯ ಗುರುತುಗಳು ಕಾಣುವದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ವರ್ಷ ಯಾವದೇ ರೀತಿಯಾದ ವ್ಯವಸಾಯ ಮಾಡಿಲ್ಲ ಎನ್ನುತ್ತಾರೆ. ಸರಕಾರದಿಂದ ಬರಪರಿಹಾರ ಪಡೆದ ಬಗ್ಗೆ ಯಾವದೇ ರೀತಿಯ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ. ನಾನು ಅಣ್ಣ ಬದುಕಿದ್ದಾಗಲೇ ದಾವಾ ಆಸ್ತಿಯ ಉತಾರವನ್ನು ತೆಗೆಸಿದ್ದು ಇಲ್ಲಿಯವರೆಗೂ ನಾನು ಪುನಃ ತೆಗೆಸಿರುವದಿಲ್ಲ. ನನಗೆ ನನ್ನ ಅಣ್ಣನವರು ಇದ್ದಾಗ ತೆಗೆಸಿದ ಉತಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ಯಾವದೇ ಮಾಹಿತಿ ಇರುವದಿಲ್ಲ ಹಾಗೂ ಹಾಜರುಪಡಿಸಿರುವದಿಲ್ಲ. ಇಲ್ಲಿಯವರೆಗೂ ನಾನು ಯಾವದೇ ರೀತಿಯ ಕರವನ್ನು ದಾವಾ ಆಸ್ತಿಗೆ ಸಂಬಂದಿಸಿದಂತೆ ತುಂಬಿರುವದಿಲ್ಲ ಮುಂದೆ ತುಂಬುತ್ತೇನೆ. ಯಾವದೇ ಖುಲ್ಲಾ ಜಾಗಾದಲ್ಲಿ ನಿಂತು ಯಾವದೇ ವ್ಯಕ್ತಿಯು ಪೋಟೋವನ್ನು ತೆಗೆಸಿಕೊಳ್ಳಬಹುದು ಎಂದರೆ ಸರಿ. ಪೋಟೋ ಆದಾರದ ಮೇಲೆ ಕಬಜಾ ತಮಗೆ ಬರುವದಿಲ್ಲ ಎಂದರೆ ಸಾಕ್ಷಿಯು ಕಬಜಾದಲ್ಲಿ ನಾನೇ ಇರುತ್ತೇನೆಂದು ನುಡಿಯುತ್ತಾರೆ. ತಾವು ದಾವಾ ಆಸ್ತಿಯಲ್ಲಿ ಕಬ್ಜಾದಲ್ಲಿ ಇದ್ದೀರಿ ಎಂದು ತೋರಿಸಲು ಯಾವದೇ ದಾಖಲೆಯನ್ನು

ಹಾಜರುಪಡಿಸಿಲ್ಲ ಎಂದರೆ ಸರಿ. ತಮಗೆ ದಾವಾ ಆಸ್ತಿಯ ಬಗ್ಗೆಯಾಗಲಿ ಈ ಪ್ರಕರಣದ ಬಗ್ಗೆಯಾಗಲಿ ಯಾವದೇ ಮಾಹಿತಿ ಇರದಿದ್ದರೂ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕೋರ್ಟ ಜಾಗಾದಲ್ಲಿ ನಿಂತು ಫೋಟೋ ತೆಗೆದುಕೊಂಡರೆ ನ್ಯಾಯಾಲಯವು ನನ್ನದಾಗುವದಿಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.